ನಕ್ಷತ್ರಪಟ



## ರಾಧೇಶ ತೋಳ್ಪಾಡಿ

ಕಲೆ: ಸೌಮ್ಯ ಪ್ರಭು ಕಲ್ಯಾಣ್‌ಕರ್

# ಕಿರಣಗಳು

ಬೆಳಗಿವೆ ಬುವಿಯನು ಕಿರಣಗಳು
ಸರಿಸುತ ನಸುಕಿನ ಮುಸುಕನ್ನು
ನೆನೆಯದೆ ಮುಂದಕೆ ನಡೆಯುವುದೆ
ಕಿರಣಗಳೊಸರುವ ಕರುಣೆಯನು?

ಕೋ ಕೋ ಕರೆವುದು ಮುಂಗೋಳಿ
ಅಂಶುಮಾನನನು ಸ್ವಾಗತಿಸಿ
ಬಗೆ ಬಗೆ ಹಾಡನು ಹಕ್ಕಿಗಳು
ತೇಲಿಸಿಬಿಡುವವು ನಮಗಾಗಿ

ಅಮ್ಮನ ಬೆರಳಿನ ಕಿರಣಗಳು
ಮೆಲ್ಲನೆ ಮೈಮನ ಸವರುವವು
ಅಪ್ಪನ ನೋಟದ ಕಿರಣಗಳು
ಏನೋ ಧೈರ್ಯವ ತುಂಬುವವು

ಅಜ್ಜಿಯು ಚೆಲ್ಲುವ ಬೊಚ್ಚುನಗೆ
ರಶ್ಮಿಯ ಹೆಸರೇ ವಾತ್ಸಲ್ಯ
ಅಜ್ಜನು ಉದುರಿಸೊ ನುಡಿಮುತ್ತು
ಅನುಭವ ದೀಪದ ಕುಡಿಕಿರಣ!

ಅಣ್ಣನೆ ಸುಧಾಂಶು ಮನೆಯೊಳಗೆ
ಹತ್ತಿರ ಇದ್ದರೆ ಉತ್ಸಾಹ
ಅಕ್ಕನೆ ಚಕಮಕ ನಕ್ಷತ್ರ
ಜತೆಗೇ ಇದ್ದರೆ ಉಲ್ಲಾಸ

ಬೆನ್ನನು ತಟ್ಟುವ ಗುರುವೃಂದ
ದೀಪಸ್ತಂಭದ ಕಿರಣಗಳು
ಬಿದ್ದರೆ ಎತ್ತುವ ಸ್ನೇಹಿತರು
ನಿತ್ಯದ ಹಬ್ಬದ ಹಣತೆಗಳು

ಕಿರಣವೆ ಅಲೆಯೋ ಅಲೆಯೇ ಹೊಳೆಯೋ
ತಣ್ಣಗೆ ಹೊಳೆವನು ಚಂದ್ರಾಮ
ಅವನೇ ತಾನೇ ನಮಗೆಲ್ಲ
ಕಾಣಲು ಸಿಕ್ಕುವ ಶ್ರೀರಾಮ!

